ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.538/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ರವಿಕುಮಾರ್** | | |
| **ತಂದೆಃಹೆಸರು** | **ಶಿವಲಿಂಗಪ್ಪ ಕಪ್ಪತ್ತನವರ್** | **ಪಿಡಬ್ಲ್ಯೂಃ** | **09** |
| **ವಯಸ್ಸು** | **44 ವರ್ಷ** | **ಸಿಡಬ್ಲ್ಯೂಃ** | **20** |
| **ಉದ್ಯೋಗಃ** | **ಸಿಪಿಐ** | | |
| **ವಾಸ ಸ್ಥಳಃ** | **ನವಲಗುಂದ ವೃತ್ತ,** | | |

ದಿನಾಂಕ 29-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ

**ಈ ದಿನ ಸಾಕ್ಷಿದಾರರು ವಿದ್ಯುನ್ಮಾನ ಯಂತ್ರ, ಗೂಗಲ್ ಮೀಟ್ ID No. rzt-ixqt-wep ಮುಖಾಂತರ ಹಾಜರಾಗಿದ್ದು, ಈ ಕೆಳಕಂಡಂತೆ ಸಾಕ್ಷಿ ವಿಚಾರಣೆ ಮಾಡಲಾಯಿತು.**

ನಾನು ದಿ.12-08-2022 ರಿಂದ ದಿ.18-09-2023 ರವರೆಗೆ ಸಿಂಧನೂರು ವೃತ್ತದಲ್ಲಿ ಸಿಪಿಐ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ06.12.2022 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-19 ರವರಿಂದ ಪಡೆದು, ಪರಿಶೀಲಿಸಿರುತ್ತೇನೆ. ಚಾಸಾ-4 & 5 ರವರನ್ನು ಹಾಜರುಪಡಿಸಿಕೊಂಡು, ಚಾಸಾ-6 ರವರು ತೋರಿಸಿದ ಸ್ಥಳದಲ್ಲಿ ಬೆ. 9-30 ರಿಂದ 10-30 ರವರೆಗೆ ಸ್ಥಳ ಪಂಚನಾಮೆಯನ್ನು ನಿಪಿ-8 ರಂತೆ ಮಾಡಿ, ಫೋಟೋಗಳನ್ನು ತೆಗೆದಿರುತ್ತೇನೆ. ಅದೇ ದಿನ ನಿಪಿ-9 ರಂತೆ ಲಾರಿ ಸಂ. ಎಪಿ 04/ಟಿಡಬ್ಲ್ಯು 8397 & ಮೋ.ಸೈ. ನಂ.ಕೆ ಎ 36/ಇ ಹೆಚ್ 3088 ನ್ನು ವಾಹನದ ಜಪ್ತು ಪಂಚನಾಮೆಯನ್ನು ಮಾಡಿ, ಫೋಟೋ ತೆಗೆದಿರುತ್ತೇನೆ. ನಿಪಿ-8 & 9 ರಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-8 ಡಿ & ನಿಪಿ-9 ಸಿ ಎಂದು ಗುರುತಿಸಲಾಯಿತು. ನಿಪಿ-4 ರಿಂದ 7, 10 ರಿಂದ 19 ನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು 2 ಸ್ವತ್ತುಪಟ್ಟಿಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-31 & 32 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-31 ಎ & 32 ಎ ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-6 ರಿಂದ 11, 16, 17 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಸಾಕ್ಷಿಯು ಕಲಂ.65 ಬಿ ಪ್ರ. ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-33 ಎಂದು, ಸಾಕ್ಷಿಯ ಸಹಿಯನ್ನು ನಿಪಿ-33 ಎ ಎಂದು ಗುರುತಿಸಲಾಯಿತು.

ದಿ.13-12-2022 ರಂದು ಆರೋಪಿತನು ಖುದ್ದಾಗಿ ಠಾಣೆಗೆ ಹಾಜರಾಗಿ, ನ್ಯಾಯಾಲಯದಿಂದ ಪಡೆದ ಜಾಮೀನಿನ ಪ್ರತಿಯನ್ನು ತಂದು ನನ್ನ ಮುಂದೆ ಹಾಜರುಪಡಿಸಿದ್ದು, ಆತನ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ, ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ಅದೇ ದಿನ ಚಾಸಾ-12 ರವರಿಗೆ ಕಲಂ.133 ನೋಟೀಸು ಕೊಟ್ಟು ಉತ್ತರ ಪಡೆದು, ಮುಚ್ಚಳಿಕೆ ಪತ್ರ ಪಡೆದು ಲಾರಿಯನ್ನು ಬಿಡುಗಡೆ ಮಾಡಿದೆನು. ನೋಟೀಸನ್ನು ನಿಪಿ-34 ಎಂದು, ಉತ್ತರವನ್ನು ನಿಪಿ-35 ಎಂದು, ಬಾಂಡನ್ನು ನಿಪಿ-36 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-34 ಎ ಯಿಂದ 36 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಸಿಡಿ & ಕಲಂ.65 ಬಿ ಪ್ರ.ಪತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-37 & 38 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-37 ಎ & 38 ಎ ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-1, 6 ರಿಂದ 11 ರವರ ಮರು ಹೇಳಿಕೆಗಳನ್ನು ಪಡೆದುಕೊಂಡೆನು.

ದಿ.19-12-2022 ರಂದು ಪಿ ಎಂ ವರದಿಯನ್ನು ಪಡೆದಿರುತ್ತೇನೆ. ಸಾಕ್ಷಿಯು ಪಿ ಎಂ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-39 ಎಂದು, ಸಾಕ್ಷಿಯ ಸಹಿಯನ್ನು ನಿಪಿ-39 ಎ ಎಂದು ಗುರುತಿಸಲಾಯಿತು.

ದಿ.21-12-2022 ರಂದು ಚಾಸಾ-14 ರವರಿಂದ ಚಾಸಾ-1 ರವರ ಗಾ.ಪ್ರ.ಪತ್ರವನ್ನು ಪಡೆದೆನು. ಸಾಕ್ಷಿಯು ಗಾ.ಪ್ರ.ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-40 ಎಂದು, ಸಾಕ್ಷಿಯ ಸಹಿಯನ್ನು ನಿಪಿ-40 ಎ ಎಂದು ಗುರುತಿಸಲಾಯಿತು.

ದಿ.30-12-2022 ರಂದು ಐ ಎಂವಿ ವರದಿಯನ್ನು ಪಡೆದಿರುತ್ತೇನೆ. ಸಾಕ್ಷಿಯು ಐ ಎಂ ವಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-41 ಎಂದು, ಸಾಕ್ಷಿಯ ಸಹಿಯನ್ನು ನಿಪಿ-41 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನದ ದಾಖಲೆಗಳನ್ನು ನೋಡಿ ಗುರುತಿಸಿದ್ದು, ವಾಹನದ ದಾಖಲೆಗಳನ್ನು, ಡಿ ಎಲ್ ಪ್ರತಿಯನ್ನು ಒಟ್ಟಾರೆಯಾಗಿ ನಿಪಿ-42 ಎಂದು ಗುರುತಿಸಲಾಯಿತು.

ಅದೇ ದಿನ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆತಿದ್ದರಿಂದ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**<u>ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ-</u>**

1. ನೀವು ಯಾವುದೇ ಕಡತ ಪಡೆದಿಲ್ಲ & ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ವರದಿಗಳನ್ನು, ಗಾ.ಪ್ರ.ಪತ್ರಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಖುದ್ದಾಗಿ ಹಾಜರಾಗಿಲ್ಲ ಎಂದರೆ ಸರಿಯಲ್ಲ. ನೀವು ವಾಹನದ ದಾಖಲೆಗಳನ್ನು ಪಡೆದಿಲ್ಲ, ನೋಟೀಸು ಕೊಟ್ಟು, ಉತ್ತರವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ವಾಹನಗಳನ್ನು ಜಪ್ತುಪಡಿಸಿಕೊಂಡಿಲ್ಲ, ಸ್ವತ್ತುಪಟ್ಟಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೆ ಇದ್ದರೂ ಸಹ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**